ಶ್ರೀ ಜಿ. ವಿ. ಗೌಡ.—ಈ ಕೇಸು ಎಷ್ಟು ದಿವಸದಿಂದ ನಡೆಯುತ್ತಿದೆ? ಅಧ್ಯಕ್ಷರು—ಒಂದು ವರ್ಷದಿಂದ ಎಂದು ಆಗಲೇ ಉತ್ತರ ಕೊಟ್ಟಿದ್ದಾರೆ.

Sri G. V. GOWDA.—For an offence of misappropriation would the police require one year for investigation Sir? May I presume that the Department is not interested in prosecuting the man who is responsible for this?

Sri RAMAKRISHNA HEGDE.—Sir, I have admitted that there has been some delay in this case. Not only in this case, in certain other cases also.

Mr. SPEAKER.—The question is: 'have the Government. any interest'?

Sri RAMAKRISHNA HEGDE.—Absolutely no interest, Sir. I am not answering that point. The Hon'ble Member asked why there was so much delay in investigation. I was submitting to the House that not only in this case but in many other cases also, the time taken by the police to investigate such cases is rather too much: and ultimately it vitiates the whole action. Therefore, Government is thinking how best we can reduce this delay. I am having a discussion with the concerned Department. I shall see that hereafter no time is lost in conducting these investigations.

[Mr. Deputy Speker in the Chair.]

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಲ್ಲಿ ಇದೇ ಹಣ ಅಲ್ಲದೆ ಇನ್ನೂ ಬೇರೆ ಹಣ ದುರುಪಯೋಗ ವಾಗಿದೆ ಎಂದು ಆ ಕ್ಷೇತ್ರದ ಸದಸ್ಯರೇ ಹೇಳುತ್ತಿರುವುದರಿಂದ ಈ ಬಗ್ಗೆ ಕೂಡಲೆ ಕಾರ್ಯಕ್ರಮ ಕೈಗೊಳ್ಳುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆದಷ್ಟು ಶೀಘ್ರವಾಗಿ ಆಕ್ಷನ್ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಹಣವನ್ನು ದುರುಪಯೋಗ ಪಡಿಸಿರತಕ್ಕ ಕಾರ್ಯದರ್ಶಿಗಳಿನ್ನೂ ಅಲ್ಲೇ ಕೆಲಸದಲ್ಲಿದ್ದಾರೆಯೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆ ಬಾಡಿಯನ್ನು ಸೂಪರ್‌ಸೀಡ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

Amount spent on the Cultural Programme conducted by the Mysore State Sangeetha Nataka Academy

*Q.—171. Sri E. NARAYAN GOWDA (Bangarpet). —

Will the Government be pleased to state:—

(*a*) the amount spent in connection with the Cultural Programme conducted by the Mysore State Sangeetha Nataka Academy during December 1963, in Town Hall; Bangalore (detailed information may be furnished);

(*b*) the number of persons to whom awards were given in this connection?

A.—Sri S. R. KANTHI (Minister for Education).—

(*a*) The total amount so far spent is Rs. 32,620-53 nP. as shown in the appended statement. Some payments are still to be made. The total expenditure is likely to be about Rs. 50,000.

(*b*) 7 (Seven).

Statement of accounts of the Seminar, Conference, and Competitions, 1963.

EXPENDITURE

		Rs. np.
1	Remuneration to Artists	11,387—00
2	State Academy Awardees	3,500—00
3	T. A. and D. A.	1,797—00
4	Boarding charges of 1,600 persons ...	4,800—00
5	Purchase of Nataraja Vigrahas ...	1,645—00
6	Purchase of Badges	322—00
7	Purchase of Shawls	845—00
8	Purchase of stamps	150—00
9	Purchase of Flowers and Bunting ...	400—00
10	Volunteer charges	501—00
11	Refreshment charges	380—53
12	Decoration charges	236—00
13	Petromax charges	62—00
14	Printing of Brochure	290—00
15	Printing of Blocks	220—00
16	Painting charges of Banners	348—00
17	Vessels hire	220—00
18	Rent for the Hostel	800—00
19	Stage work	59—00
20	Reporting charges	100—00
21	Judges sitting fees	300—00
22	Govardhan Printers	1,155—00
23	Taxi hire and other expenses	3,103—00
	Total	32,620—53

ಶ್ರೀ ಇ. ನಾರಾಯಣ ಗೌಡ.—ಈ ಬಗ್ಗೆ ಪೂರ್ತಿ ಹಣವನ್ನೇಕೆ ಪಾವತಿಮಾಡಲಿಲ್ಲ?

†ಶ್ರೀ ಎಸ್. ಆರ್. ಕಂಠಿ.—ಇನ್ನೂ ಕೆಲವು ಬಿಲ್ಸ್‌ಗಳು ಬಂದಿಲ್ಲ, ಬರಬೇಕಾಗಿದೆ.

ಶ್ರೀ ಜಿ. ವಿ. ಗೌಡ.—ಇದರಿಂದ ಬಂದ ಆದಾಯವೆಷ್ಟು?

ಶ್ರೀ ಎಸ್. ಆರ್. ಕಂಠಿ.—ಇನ್ನೂ ಪೂರ್ತಿಯಾಗಿ ಲೆಕ್ಕಗಳಾಗಿಲ್ಲ. ಈಗ ವಸೂಲಾಗಿರತಕ್ಕ ಹಣದ ವಿವರ ಹೀಗಿದೆ:—

Grant from the Central Academy ...	Rs.	5,000
Sale of Tickets	Rs.	5,161
Delegation fees	Rs.	245
Application fees and entrance fees ...	Rs.	1,179
Advertisement	Rs.	6,000
Sale of Souvenir	Rs.	16,000

ಶ್ರೀ ಎಸ್. ಶಿವಪ್ಪ.—ಇಂಥ ದೊಡ್ಡ ಮೊಬಲಗಿನ ಬಗ್ಗೆ ಇಷ್ಟು ಲೆಕ್ಕಗಳನ್ನಿಡಲು ನಿಧಾನ ಮಾಡಲು ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಈ ಗಾಗಲೇ ಲೆಕ್ಕಗಳನ್ನಿಡತಕ್ಕ ಕೆಲಸ ನಡೆಯುತ್ತಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ನಾಟಕ ಅಕ್ಯಾಡಮಿಯ ಮೆಂಬರುಗಳು ಯಾರು, ಇವರನ್ನು ಮೆಂಬರುಗಳನ್ನಾಗಿ ಮಾಡಿ ಎಷ್ಟು ವರ್ಷಗಳಾಯಿತು ? ಇವರು ಹಂಚಿರತಕ್ಕ ಬಹುಮಾನಗಳೆಲ್ಲಾ ಅವರ ಸಂಬಂಧಿಗಳಿಗೇ ಸಿಕ್ಕಿರುತ್ತವೆಂಬ ಅಂಶ ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಆ ಕಮಿಟಿ ರಚನೆಯಾಗಿ ಎರಡೂವರೆ ವರ್ಷಗಳಮೇಲಾಯಿತು. ಈಗ ಅದನ್ನು ರೀಕಾನ್‌ಸ್ಟಿಟ್ಯೂಟ್ ಮಾಡತಕ್ಕ ಕಾಲ ಬಂದಿದೆ ಎಂದು ಕಾಣುತ್ತದೆ. ಈ ಅಕ್ಯಾಡಮಿಯವರು ಕೊಟ್ಟಿರತಕ್ಕ ಬಹುಮಾನಗಳ ಪಟ್ಟಿ ಓದಿಹೇಳುತ್ತೇನೆ ; ಕೇಳಿ :—

Remuneration to Artistes.

MYSORE STATE SANGEETH NATAK ACADEMY.

1959—60

Sri Vasudevachar
Sri G. H. Veeranna
Sri T. Chowdiah

1960—61

Sri M. Subbiah Naidu
Sri Chintalapalli Venkata Rao
Sri Mallikarjun Mansur
Sri T. M. Puttaswamiah
Smt. Malavalli Sundaramma
Sri K. Gundappa
Smt. Venkatalakshamma
Sri Puttaraj Gavai
Sri R. S. Keshava Murthy

1961—62

Sri B. Devendrappa
Smt. Gangubai Hanagal
Sri Nagendra Rao
Srimathi Lakshmi Bai
Smt. Sundaramma

Sri Veerabhadrappa Karadi

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮಗೆ ಈಗ ಆ ಕರಡಿ ವಿಚಾರ ಬೇಕಾಗಿಲ್ಲ.....

ಶ್ರೀ ಎಸ್. ಆರ್. ಕಂಠಿ.—ಕರಡಿ ಕಾಡಿನಲ್ಲಿದೆ. ಹುಲಿ ನೀವು ಇಲ್ಲಿದ್ದೀರಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ನೀವು ಇಲ್ಲೇನಾಗಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ನಾನು ಇಲ್ಲಿ ನರಿಯಾಗಿದ್ದೇನೆ (ನಗು).....

1962—63

Sri Adya Raangachar
Sri Ranganatha Bhatta
Sri Subbanna
Sri Basavaraj Guru
Sri Halageri Chikkajettappa
Smt. Girijamma

ಶ್ರೀ ಎಸ್. ಎಂ. ಕೃಷ್ಣ.—ಹಾಸ್ಟಲ್ ರೆಂಟ್ 800 ರೂಪಾಯಿಗಳಂತೆ ಯಾವ ಹಾಸ್ಟಲನ್ನು ಬಾಡಿಗೆಗೆ ತೆಗೆದುಕೊಂಡಿದ್ದರು, ಎರಡನೆಯದಾಗಿ ಟ್ಯಾಕ್ಸಿ ಹೈರ್ 3,103 ರೂಪಾಯಿಗಳು ಎಂದು ನಮೂದು ಮಾಡಿದ್ದೀರಿ. ಇಷ್ಟು ಟ್ಯಾಕ್ಸಿಗಳು ಬೆಂಗಳೂರಿನಲ್ಲಿ ಎಲ್ಲಿ ಬಂತು ?

ಶ್ರೀ ಎಸ್. ಆರ್. ಕಂಠಿ.—ಟ್ಯಾಕ್ಸಿ ಛಾರ್ಜು ಒಂದು ದಿವಸದ್ದು ಅಲ್ಲ, ಒಂದು ಅಥವಾ ಎರಡು ತಿಂಗಳದು. ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಎಲ್ಲಾ ಹಾಸ್ಟಲ್‌ನಲ್ಲಿ ಕೊಟ್ಟದ್ದು.

ಶ್ರೀ ಅಂದಾನಯ್ಯ.—ಈ ಸಮ್ಮೇಳನದಲ್ಲಿ ಎಷ್ಟು ಜನರು ಭಾಗವಹಿಸಿದ್ದರು ?

ಶ್ರೀ ಎಸ್. ಆರ್. ಕಂಠಿ.—ಬಹಳ ಜನ ಭಾಗವಹಿಸಿದ್ದರು.

ಶ್ರೀ ಎಸ್. ಎಂ. ಕೃಷ್ಣ.—ರಿಪೋರ್ಟಿಂಗ್ ಛಾರ್ಜಸ್ 100 ರೂಪಾಯಿಗಳು ಎಂದಿದೆ. ಏನು ರಿಪೋರ್ಟ್ ಮಾಡಿದ್ದು ?

ಶ್ರೀ ಎಸ್. ಆರ್. ಕಂಠಿ.—ಸಮ್ಮೇಳನದಲ್ಲಿ ಏನು ನಡೆಯುತ್ತಾ ಇರುತ್ತದೋ ಅದೆಲ್ಲವನ್ನು ಪ್ರೊಸೀಡಿಂಗ್ಸ್ ಮಾಡುತ್ತಾರೆ. ಅದಕ್ಕೆ ಪ್ರೊಸೀಡಿಂಗ್ಸ್ ಛಾರ್ಜಸ್ ಎಂದು ಹೇಳುವುದು.

ಶ್ರೀಮತಿ ಸುಶೀಲಬಾಯಿ ಹೀರಾಚಂದ್ ಷಾ.—ಈ ಸಂಸ್ಥೆಯವರು ಏರ್ಪಡಿಸಿದ ಕಾರ್ಯಕಲಾಪಗಳಿಂದ ಜನರಿಗೆ ಬಹಳ ಬೇಜಾರು ಆದುದರಿಂದ ಅಂಥಾದ್ದನ್ನು ಏತಕ್ಕೆ ಈ ಸರ್ಕಾರದವರು ನಡೆಸುತ್ತಾರೆ ? ಒಳ್ಳೆಯ ಪ್ರೋಗ್ರಾಂ ಮಾಡಬಾರದೇ ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರಿಗೆ ಇಲ್ಲದ ಡಾನ್ಸ್, ನಾಟಕ, ಸಂಗೀತ ಹಿಡಿಸಲಾರದೆಂದು ಕಾಣುತ್ತದೆ. ಅವರ ಸಂಗೀತ, ನಾಟಕ ಬೇರೆ ಇದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಈ ಸಮ್ಮೇಳನದಲ್ಲಿ ಭಾಗವಹಿಸಿದ್ದಂತಹ ಕಲಾವಿದರುಗಳನ್ನು ಸಂಸ್ಥೆಯ ಕಮಿಟಿ ಸದಸ್ಯರು ಬಹಳ ಪಾರ್ಷಿಯಲ್ಲಾಗಿ ತಮ್ಮ ಸಂಬಂಧೀಕರನ್ನೇ ಆರಿಸಿರುತ್ತಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ನಾಟಕ, ಸಂಗೀತ, ಮತ್ತು ನೃತ್ಯ ಎಂಬುವು ಬೇರೆ ಬೇರೆ ಭಾಗಗಳು. ಕಲಾವಿದರನ್ನು ಆರಿಸುವುದರಲ್ಲಿ ಪಾರ್ಷಿಯಾಲಿಟಿ ಆಗಿದೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದನ್ನು ನೋಡುತ್ತೇನೆ.

ಶ್ರೀ ಇ. ನಾರಾಯಣ ಗೌಡ.—ಇಷ್ಟೊಂದು ಹಣವನ್ನು ಸಂಗೀತಗಾರರಿಗೋಸ್ಕರ ಖರ್ಚು ಮಾಡಿದ್ದೀರಿ. ಆದರೆ ರಾಜ್ಯದಲ್ಲಿರತಕ್ಕ ಇನ್ನು ಕೆಲವು ಸಂಗೀತಗಾರರು ತಮಗೆ ಈ ಕಾರ್ಯಕಲಾಪಗಳಲ್ಲಿ ಅವಕಾಶ ಕೊಡದೆ ಅನ್ಯಾಯ ಮಾಡಿದ್ದಾರೆಂದು ಗೃಹ ಮಂತ್ರಿಗಳಿಗೆ ಮನವಿ ಕೊಟ್ಟಿರುವುದು ನಿಜವೇ ?

ಶ್ರೀ ಎಸ್. ಆರ್. ಕಂಠಿ.—ಒಬ್ಬ ಸಂಗೀತಗಾರ ಮತ್ತೊಬ್ಬ ಸಂಗೀತಗಾರನಿಗೆ ಸರಿಹೋಗುವುದಿಲ್ಲ. ಏನೂ ಮಾಡಿದರೂ ಒಬ್ಬರಿಗೊಬ್ಬರು ತಪ್ಪುಗಳನ್ನು ಹುಡುಕುವುದರಿಂದ ಕೆಲವು ಸಂದರ್ಭಗಳಲ್ಲಿ ಸಣ್ಣ ಪುಟ್ಟ ರೋಷದೋಷಗಳು ಬರುವುದು ಸಹಜ. ಆದರೆ ಯಾರು ಏನು ಮಾಡಿದರೂ ಸಂಗೀತಗಾರರು ತಮ್ಮ ತಮ್ಮಲ್ಲಿಯೇ ಒಂದು ತರಹ ಒಬ್ಬರಿಗೊಬ್ಬರು ಅಸೂಯೆ, ದ್ವೇಷವಿದ್ದಂತೆ ವರ್ತಿಸುತ್ತಾರೆ. ಅಂಥಾದ್ದನ್ನು ಸರಿಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ್.—(ಅ) ಗೆ ಉತ್ತರವಾಗಿ ಏಳು ವ್ಯಕ್ತಿಗಳ ಹೆಸರುಗಳನ್ನು ಕೊಟ್ಟಿದ್ದೀರಿ. ಯಾವ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಪ್ರಶಸ್ತಿಗಳನ್ನ ಕೊಟ್ಟಿದ್ದಾರೆ ?

ಶ್ರೀ ಎಸ್. ಆರ್. ಕಂಠಿ—ಅವರ ಒಂದು ವಿದ್ಯಾ ಪ್ರಾವೀಣ್ಯತೆ, ಪ್ರಸಿದ್ಧರಾದ ಜನರು ಮತ್ತು ಶ್ರೇಷ್ಠ ಕಲಾವಿದರು ಎಂಬುದನ್ನು ಪರಿಗಣಿಸಿ ಅದಕ್ಕೆ ಸಂಬಂಧಪಟ್ಟ ಕಮಿಟಿಯವರು ಅವರನ್ನು ಆರಿಸಿರುತ್ತಾರೆ.

ಶ್ರೀ ಜೆ. ಪಿ. ಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕಲಾವಿದರಿಗೂ ಇಂಥಾ ಕಾರ್ಯಕಲಾಪಗಳಲ್ಲಿ ಮತ್ತು ಮನರಂಜನೆಯ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೇನಾದರೂ ಸರ್ಕಾರದವರು ಉತ್ತೇಜನ ಕೊಟ್ಟಿದ್ದಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಇದು ಒಳ್ಳೆಯ ಸೂಚನೆ. ಇದರಲ್ಲಿ ಬಹಳ ಖರ್ಚಿನ ಕೆಲಸವಿದೆ. ಒಂದು ಕೆಲಸ ಮಾಡಬೇಕೆಂದಿದ್ದೇನೆ. ಕೆಲವು ರೀಜನಲ್ ಹಬ್ಬಗಳನ್ನು ಮಾಡಬೇಕೆಂಬ ಯೋಚನೆ ಇದೆ. ಅದನ್ನು ಇನ್ನು ಮುಂದೆ ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ, ಮತ್ತು ಗುಲ್ಬರ್ಗಾ ಗಳಲ್ಲಿ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಮಾನ್ಯ ವಿದ್ಯಾಮಂತ್ರಿಗಳು ಡಿಸೆಂಬರ್ ತಿಂಗಳಲ್ಲಿ ಪುರಭವನದಲ್ಲಿ ನಡೆದ ಸಂಸ್ಕೃತಿ ಕಾರ್ಯಕಲಾಪಗಳಲ್ಲಿ ಬಹಳ ಜನ ಭಾಗವಹಿಸಿದ್ದರು ಎಂಬುದಾಗಿ ಹೇಳಿದರು. ಆದರೆ ಮಾನ್ಯ ಮಂತ್ರಿಗಳೇ ಆ ದಿನ ಗೈರುಹಾಜರಿಯಾಗಿದ್ದರು ಅಂದಮೇಲೆ ಬಹಳ ಜನ ಬಂದಿದ್ದರೆಂದು ಇಲ್ಲಿ ಹೇಗೆ ಹೇಳುತ್ತಾರೆ ?

ಶ್ರೀ ಎಸ್. ಆರ್. ಕಂಠಿ.—ಆ ಸಂಸ್ಥೆಯ ಸಂಸ್ಕೃತಿ ಕಾರ್ಯಕರ್ತರಗಳಲ್ಲಿ ಅಧ್ಯಕ್ಷತೆ ವಹಿಸುವುದು ನನ್ನ ಕೆಲಸವಾಗಿರಲಿಲ್ಲ. ಅನೇಕ ಕೆಲಸಗಳು ಅಲ್ಲಿ ನಡೆಯುವಾಗ ಅವೆರ್ಲಾ ವರದಿಯಾಗುತ್ತವೆ. ಆ ಒಂದು ಆಧಾರದ ಮೇಲೆ ಆ ರೀತಿ ಹೇಳಬಹುದು. ನಾನು ಆ ಹೊತ್ತು ಸ್ವಾಗತ ಭಾಷಣ ಮಾಡ ಬೇಕಾಗಿತ್ತು. ನಾನು ಕಾರಣಾಂತರದಿಂದ ಊರಿನಲ್ಲಿರಲಿಲ್ಲ. ಶ್ರೀಮಾನ್ ನಿಟ್ಟೂರು ಶ್ರೀನಿವಾಸ ರಾಯರು ಓಪನಿಂಗ್ ಮಾಡಿದ್ದಾರೆ. ಮುಖ್ಯಮಂತ್ರಿಗಳು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಎಸ್. ಗೋಪಾಲ ಗೌಡ.—(ಅ) ಉತ್ತರದಲ್ಲಿ ಕೆಲವು ಸಂದರ್ಭಗಳಲ್ಲಿ ಹಣವನ್ನು ಇನ್ನೂ ಪಾವತಿ ಮಾಡಬೇಕಾಗಿದೆ ಎಂದು ಹೇಳಿದ್ದಾರೆ. ಮತ್ತು ಒಟ್ಟು ಮೆಚ್ಚ ಸುಮಾರು 50 ಲಕ್ಷ ರೂಪಾಯಿಗಳು ಆಗುವ ಸಂಭವವಿದೆಯೆಂದು ಹೇಳಿದ್ದಾರೆ. ಆ ಬಗ್ಗೆ ವಿವರಗಳನ್ನು ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಆ ವಿವರಗಳನ್ನು ಕೊಡುವುದಕ್ಕೆ ನಮ್ಮಲ್ಲಿ ಇನ್ನೂ ರಶೀದಿಗಳು ಬಂದಿಲ್ಲ. ಅಂದಾಜುಬೇಕು ಎಂದು ಮಾನ್ಯ ಸದಸ್ಯರು ಹೇಳಿದರೆ ಆ ಮಾಹಿತಿಯನ್ನು ಕೊಡುತ್ತೇನೆ.

Handing over of the Bangalore Transport Service to Private Agency.

*Q—202. **Sri V. MASIYAPPA** (Hiriyur).—

Will the Government be pleased to state.—

(*a*) whether the Hon'ble Minister for Transport has stated in one of his recent speeches that the Bangalore Transport Service will be handed over to private agency, if any one is coming forward to take it up ;

(*b*) if so, what are the reasons for such a decision ;

(*c*) what further action has been taken in that direction ?

A.—**Sri D. DEVARAJ URS** (Minister for Labour, Housing and Transport).—

(*a*) No.

(*b*) and (*c*) Does not arise, in view of reply to Clause (*a*).

ಶ್ರೀ ವಿ. ಮಸಿಯಪ್ಪ.—ಜನವರಿ ತಿಂಗಳಲ್ಲಿ ಮಾನ್ಯ ಸಾರಿಗೆ ಮಂತ್ರಿಗಳು ಒಂದು ಸಭೆಯಲ್ಲಿ ಬೆಂಗಳೂರಿನ ಟ್ರಾನ್ಸ್‌ಪೋರ್ಟಿನ ಸರ್ವಿನ್ಸನ್ನು ಯಾರಾದರೂ ಖಾಸಗೀಯವರು ತೆಗೆದುಕೊಂಡಿದ್ದಾ ದರೆ ಅವರಿಗೆ ಕೊಡಲಿಕ್ಕೆ ತಯಾರಿದ್ದೇವೆಂಬ ಹೇಳಿಕೆ ಕೊಟ್ಟಿದ್ದನ್ನು ಪತ್ರಿಕೆಯ ಮುಖಪುಟದಲ್ಲಿ ದಪ್ಪ ಅಕ್ಷರಗಳಲ್ಲಿ ಬಂದುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ್ ಅರಸ್. —ನಾನು ಎಲ್ಲೂ ಹೇಳಿಲಿಲ್ಲವೆಂದು ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಒಂದು ಸಭೆ ಎಂದು ಹೇಳಿದರು. ನಿರ್ದಿಷ್ಟವಾಗಿ ಇಂಥ ಸಭೆಯೆಂದು ಹೇಳಿದ್ದರೆ.....

Mr. DEPUTY SPEAKER.—Has the Hon'ble Member tried to ascertain.....

Sri V. MASIYAPPA.—I have read it in the papers.

Mr. DEPUTY SPEAKER.—Is the Hon'able Member asking from personal knowledge ? is he not relying upon paper reports only ?

Sri V. MASIYAPPA.—I am asking whether such a publication in the papers has come to the notice of Government ? If necessary, I will produce the paper.

Sri D. DEVARAJ URS.—No, I am not aware.

Sri S. M KRISHNA.—Has it come to the notice of Government that the Minister concerned has made a statement on the floor of the Legisla-